# ತುಮಕೂರು ವಿಶ್ವವಿದ್ಯಾನಿಲಯ

ಸಂಖ್ಯೆ:ತುವಿ:ಸಿಬ್ಬಂದಿ:ಇ-2959:2022-23/4018 ದಿನಾಂಕ:21.11.2022

## : ಸುತ್ತೋಲೆ :

ವಿಷಯ:- "ಪುಣ್ಯಕೋಟಿ ದತ್ತು ಯೋಜನೆ"ಯ ಸುಗಮ ಅನುಷ್ಠಾನಕ್ಕಾಗಿ ವಿಶ್ವವಿದ್ಯಾನಿಲಯದ ನೌಕರರ ವೇತನದಿಂದ ವಂತಿಕೆಯನ್ನು ಕಟಾಯಿಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ: ಆಇ42 ಎಸ್ ಆರ್ ಪಿ2022, ದಿನಾಂಕ:16.11.2022

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.11.2022 (ಕಂಡಿಕೆ-234,ಪು.ಸಂ:-39)

* * * * *

2022-23ರ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪುಣ್ಯ ಕೋಟಿ ದತ್ತು ಯೋಜನೆಯನ್ನು ಆರಂಭಿಸುವುದಾಗಿ ಘೋಷಿಸಿರುತ್ತಾರೆ ಸದರಿ ಯೋಜನೆಯ ಧ್ಯೇಯೋದ್ದೇಶಕ್ಕೆ ಪೂರಕವಾಗಿ ಗೋವುಗಳನ್ನು ಪೋಷಿಸುವ ಹಾಗೂ ಪುಣ್ಯಕೋಟಿ ದತ್ತು ಯೋಜನೆಯನ್ನು ಸುಗಮವಾಗಿ ಅನುಷ್ಠಾನಗೊಳಿಸಲು ರಾಜ್ಯದ ಸರ್ಕಾರಿ ನೌಕರರು ಮತ್ತು ನಿಗಮ/ಮಂಡಳಿ/ಪ್ರಾಧಿಕಾರ/ವಿಶ್ವವಿದ್ಯಾನಿಲಯ/ಸ್ವಾಯತ್ತ ಸಂಸ್ಥೆಗಳ ನೌಕರರ ನವೆಂಬರ್-2022ರ ಮಾಹೆಯ ವೇತನದಿಂದ ಒಂದು ಬಾರಿಗೆ ಸೀಮಿತವಾಗಿ ಕೆಳಗೆ ನಿರ್ದಿಷ್ಟಪಡಿಸಿದ ಮೊತ್ತದ ವಂತಿಕೆಯನ್ನು ಕಟಾಯಿಸಲು ಉಲ್ಲೇಖ (1)ರಲ್ಲಿ ಸರ್ಕಾರವು ಆದೇಶಿಸಿರುತ್ತದೆ. ಈ ಹಿನ್ನಲೆಯಲ್ಲಿ ಸರ್ಕಾರದ ಆದೇಶದನ್ವಯ ಸದರಿ ಯೋಜನೆಗೆ ನಿಗದಿತ ವಂತಿಕೆಯನ್ನು ಕೊಡಲಿಚ್ಛಿಸದ ತುಮಕೂರು ವಿಶ್ವವಿದ್ಯಾನಿಲಯದ ಖಾಯಂ ನೌಕರರು ತಮ್ಮ ಅಸಮ್ಮತಿಯನ್ನು ಲಿಖಿತ ರೂಪದಲ್ಲಿ ದಿನಾಂಕ:25.11.2022ರೊಳಗೆ ಹಣಕಾಸು ವಿಭಾಗಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

| ಕ್ರ. ಸಂ | ವೃಂದ | ಒಂದು ಬಾರಿಗೆ ಪಾವತಿಸುವ ಮೊತ್ತ |
|---|---|---|
| 1. | "ಎ" ವೃಂದದ ಅಧಿಕಾರಿಗಳು | ರೂ. 11,000/- |
| 2. | "ಬಿ" ವೃಂದದ ಅಧಿಕಾರಿಗಳು | ರೂ. 4,000/- |
| 3. | "ಸಿ" ವೃಂದದ ನೌಕರರು | ರೂ. 400/- |
| 4. | "ಡಿ" ವೃಂದದ ನೌಕರರು | ವಿನಾಯಿತಿ |

ಕರಡು ಪ್ರತಿ ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.

ಆದೇಶದ ಮೇರೆಗೆ

Rameshreddy

ಉಪಕುಲಸಚಿವರು

ಉಪಕುಲಸಚಿವರು
(ಸಿಬ್ಬಂದಿ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು

ಗೆ,

ಎಲ್ಲಾ ಖಾಯಂ ನೌಕರರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ- ಮುಂದಿನ ಸೂಕ್ತ ಕ್ರಮಕ್ಕಾಗಿ (ಸರ್ಕಾರದ ಆದೇಶದ ಪ್ರತಿ ಲಗತ್ತಿಸಿದೆ.)
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು (ಎಲ್ಲಾ ನೌಕರರ ಇ-ಮೇಲ್ ವಿಳಾಸಕ್ಕೆ ರವಾನಿಸುವುದು ಮತ್ತು ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು)
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ತುಮಕೂರು ವಿಶ್ವವಿದ್ಯಾನಿಲಯ.
4. ಮಾನ್ಯ ಕುಲಸಚಿವರ ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ.
5. ಕಛೇರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- "ಪುಣ್ಯಕೋಟಿ ದತ್ತು ಯೋಜನೆ"ಯ ಸುಗಮ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ವೇತನದಿಂದ ವಂತಿಗೆಯನ್ನು ಕಟಾವು ಮಾಡಿ ನಿಗದಿತ ಯೋಜನೆಗೆ ಬಳಸುವ ಕುರಿತು.

ಓದಲಾಗಿದೆ: -

1. ಮಾನ್ಯ ಮುಖ್ಯಮಂತ್ರಿರವರ ಪತ್ರ ಸಂಖ್ಯೆ:ಮುಮಂ/ಗೃಕ/73/2022, ದಿನಾಂಕ:14.09.2022.
2. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘರವರ ಪತ್ರ ಸಂಖ್ಯೆ:ಜಿ.ಇ.ಎ./1568/2022, ದಿನಾಂಕ:14.10.2022.
3. ಖಜಾನೆ ಆಯುಕ್ತರ ಪತ್ರ ಸಂಖ್ಯೆ:DOT-TNMCOMIS(MIS)/34/2022-0/E930557, ದಿನಾಂಕ 15.11.2022.

*****

ಪ್ರಸ್ತಾವನೆ:-

2022-23ರ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪುಣ್ಯಕೋಟಿ ದತ್ತು ಯೋಜನೆಯನ್ನು ಆರಂಭಿಸುವುದಾಗಿ ಘೋಷಿಸಿರುತ್ತಾರೆ. ಸದರಿ ಯೋಜನೆಯ ಧ್ಯೇಯೋದ್ದೇಶಕ್ಕೆ ಪೂರಕವಾಗಿ ಗೋವುಗಳನ್ನು ಪೋಷಿಸುವ ಕಾರ್ಯದಲ್ಲಿ ರಾಜ್ಯದ ಸಮಸ್ತ ಸರ್ಕಾರಿ ನೌಕರರು ಮತ್ತು ಸರ್ಕಾರದ ಅವಿಭಾಜ್ಯ ಅಂಗವಾದ ನಿಗಮ/ಮಂಡಳಿ/ ಪ್ರಾಧಿಕಾರ/ವಿಶ್ವವಿದ್ಯಾಲಯ/ಸ್ವಾಯತ್ತ ಸಂಸ್ಥೆಗಳ ನೌಕರರುಗಳು ಸಹಕರಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಕರೆ ನೀಡಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಭಾರತೀಯ ಕೃಷಿ ಪರಂಪರೆಯ ಅವಿಭಾಜ್ಯ ಅಂಗವಾದ ಗೋವುಗಳು ದೇಶದ ಸಂಸ್ಕೃತಿ ಹಾಗೂ ಸಂಪತ್ತಿನ ಪ್ರತೀಕವಾಗಿದ್ದು, ಗೋ ಸಂತತಿಯನ್ನು ರಕ್ಷಿಸುವ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರವು ಘೋಷಿಸಿರುವ ಪುಣ್ಯಕೋಟಿ ದತ್ತು ಯೋಜನೆಯನ್ನು ಸುಗಮವಾಗಿ ಅನುಷ್ಠಾನಗೊಳಿಸಲು ಅನುವಾಗಲು ರಾಜ್ಯ ಸರ್ಕಾರಿ ನೌಕರರು ಹಾಗು ನಿಗಮ/ಮಂಡಳಿ/ಪ್ರಾಧಿಕಾರ/ವಿಶ್ವವಿದ್ಯಾಲಯ/ಸ್ವಾಯತ್ತ ಸಂಸ್ಥೆಗಳ ನೌಕರರ ವೇತನದಿಂದ ಒಂದು ಬಾರಿಗೆ ಸೀಮಿತವಾಗಿ ವಂತಿಗೆಯನ್ನು ಕಟಾವು ಮಾಡಿ ನಿಗದಿತ ಯೋಜನೆಗೆ ಬಳಸುವಂತೆ ಮೇಲೆ ಓದಲಾದ (2) ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಕೋರಿರುತ್ತಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸದುದ್ದೇಶವನ್ನು ಸರ್ಕಾರವು ಶ್ಲಾಘಿಸುತ್ತದೆ. ನೌಕರರ ಸಂಘದ ಕೋರಿಕೆಯನ್ನು ಪರಿಗಣಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸುತ್ತದೆ.

TO DR (EST)

**ಸರ್ಕಾರದ ಆದೇಶ ಸಂಖ್ಯೆ: ಆಇ 42 ಎಸ್‌ಆರ್‌ಪಿ 2022,**

**ಬೆಂಗಳೂರು, ದಿನಾಂಕ: 16ನೇ ನವೆಂಬರ್, 2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, "ಪುಣ್ಯಕೋಟಿ ದತ್ತು ಯೋಜನೆ"ಯ ಸುಗಮ ಅನುಷ್ಠಾನಕ್ಕಾಗಿ ವಿವಿಧ ವೃಂದದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಹಾಗು ನಿಗಮ/ಮಂಡಳಿ/ಪ್ರಾಧಿಕಾರ/

17/11/22

17/11/22

ವಿಶ್ವವಿದ್ಯಾಲಯ/ಸ್ವಾಯತ್ತ ಸಂಸ್ಥೆಗಳ ನೌಕರರ ನವೆಂಬರ್-2022ರ ಮಾಹೆಯ ವೇತನದಿಂದ ಒಂದು ಬಾರಿಗೆ ಸೀಮಿತವಾಗಿ ಈ ಕೆಳಗೆ ನಿರ್ದಿಷ್ಟಪಡಿಸಿದ ಮೊತ್ತದ ವಂತಿಗೆಯನ್ನು ಕಟಾಯಿಸಲು ಹಾಗೂ ನಿಗದಿತ ಯೋಜನೆಗೆ ಬಳಕೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

| ಕ್ರ. ಸಂ. | ವೃಂದ | ಒಂದು ಬಾರಿಗೆ ಪಾವತಿಸುವ ಮೊತ್ತ |
|---|---|---|
| 1. | "ಎ" ವೃಂದದ ಅಧಿಕಾರಿಗಳು | ರೂ. 11,000/- |
| 2. | "ಬಿ" ವೃಂದದ ಅಧಿಕಾರಿಗಳು | ರೂ. 4,000/- |
| 3. | "ಸಿ" ವೃಂದದ ನೌಕರರು | ರೂ.400/- |
| 4. | "ಡಿ" ವೃಂದದ ನೌಕರರು | ವಿನಾಯಿತಿ |

ಪುಣ್ಯಕೋಟಿ ದತ್ತು ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರಿ ನೌಕರರ ವೇತನ ಬಿಲಿನಲ್ಲಿ ಮೊತ್ತವನ್ನು ಕಟಾಯಿಸಲು ಹಾಗೂ ಮೊತ್ತವನ್ನು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರಿಗೆ ಖಜಾನೆ ಅಧಿಕಾರಿಗಳು ಸಂದಾಯ ಮಾಡಲು ಈ ಕೆಳಗೆ ಸೂಚಿಸಿರುವ ವಿಧಾನಗಳಂತೆ ಕ್ರಮ ತೆಗೆದುಕೊಳ್ಳುವುದು:-

ಅ) ನೌಕರರ ವೇತನದಲ್ಲಿ ನಿಗದಿತ ವಂತಿಗೆಯನ್ನು ನವೆಂಬರ್-2022ರ ಮಾಹೆಯ ವೇತನದ ಬಿಲ್ಲಿನಿಂದ ಕಟಾವುಗೊಳಿಸುವ ಮೂಲಕ ವಸೂಲಿ ಮಾಡಲು ಆಯಾ ಕಛೇರಿಗಳ ಮುಖ್ಯಾಧಿಕಾರಿಗಳು ಮತ್ತು ಖಜಾನಾಧಿಕಾರಿಗಳು ಅಧಿಕಾರ ಪಡೆದಿರುತ್ತಾರೆ.

ಆ) ವೇತನದಿಂದ ನಿಗದಿತ ವಂತಿಗೆಯನ್ನು ಕೊಡಲಿಚ್ಛಿಸದ ನೌಕರರು ತಮ್ಮ ಅಸಮ್ಮತಿಯನ್ನು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಗೆ ಲಿಖಿತ ಮೂಲಕ ದಿನಾಂಕ:25.11.2022ರೊಳಗಾಗಿ ಸಲ್ಲಿಸತಕ್ಕದ್ದು ಮತ್ತು ಅಂತಹ ನೌಕರರ ವೇತನದಿಂದ ನಿಗದಿತ ವಂತಿಗೆಯನ್ನು ಕಟಾವು ಮಾಡತಕ್ಕದ್ದಲ್ಲ.

ಇ) ರಾಜ್ಯ ಸರ್ಕಾರಿ ನೌಕರರ ವೇತನದಿಂದ ಕಡಿತ ಮಾಡಲಾಗುವ ವಂತಿಗೆ ಹಾಗೂ ಇತರೆ ಸಂಸ್ಥೆಗಳ ನೌಕರರಿಂದ ಕಡಿತ ಮಾಡುವ ವಂತಿಗೆಗಳನ್ನು ಲೆಕ್ಕ ಮಾಡಲು ಖಜಾನೆ-2ರಲ್ಲಿ ತೆರೆಯಲಾದ ಈ ಕೆಳಗೆ ನಮೂದಿಸಿರುವ "ವಂತಿಗೆಗಳು" (Contributions) ಠೇವಣಿ ಖಾತೆಯಲ್ಲಿ ಜಮೆ ಮಾಡಲು ಈ ಕೆಳಕಂಡಂತೆ ನೀಡಲಾದ Flow Chartನಂತೆ ಕ್ರಮವಹಿಸುವುದು:-

| K2 ಖಾತೆ ಸಂಖ್ಯೆ | K2 ಲೆಕ್ಕ ಶೀರ್ಷಿಕೆ | ಖಾತೆ ವಿವರ |
|---|---|---|
| 27572E094 | 8449-00-120-0-18-716 | Contributions Account of Joint Director, State Huzur Treasury, Bengaluru |

i. HRMS ನಲ್ಲಿ ವೇತನ ಬಿಲ್ಲುಗಳನ್ನು ಸೃಜಿಸುವಾಗ, ಕಡಿತಗೊಳಿಸಲು ಆದೇಶಿಸುವ ಮಾಹೆಗಳಲ್ಲಿ ಇತರೆ ಕಡಿತಗಳನ್ನು ಮಾಡುವಂತೆ ಡಿಡಿಓ ರವರು "ವಂತಿಗೆಗಳು" (Contributions) ಅಡಿ ಪ್ರತಿ ನೌಕರರಿಂದ ಕಡಿತಗೊಳಿಸುವ ಮೊತ್ತವನ್ನು ನಮೂದಿಸಬೇಕಾಗಿರುತ್ತದೆ.

ii. ಬಿಲ್ಲಿನಲ್ಲಿ ಸದರಿ ಮೊತ್ತಗಳು ಕಡಿತವಾಗಿ ಪ್ರತ್ಯೇಕ ಷೆಡ್ಯೂಲ್ ಸೃಜನೆಯಾಗುತ್ತದೆ.

iii. ಈ ರೀತಿ ಕಡಿತಗೊಂಡ ಮೊತ್ತಗಳು ಮೇಲ್ಕಂಡ ಲೆಕ್ಕ ಶೀರ್ಷಿಕೆ ಹಾಗೂ ಖಾತೆಯಲ್ಲಿ ಸಂಚಿತವಾಗಿ ಸ್ವಯಂ ಲೆಕ್ಕವಾಗುತ್ತದೆ.

iv. ರಾಜ್ಯ ಹುಜೂರ್ ಖಜಾನೆಯು ಲೆಕ್ಕ ಅಖೈರಾದ ನಂತರ, ಜಮೆಗಳನ್ನು ಸಮನ್ವಯ ಮಾಡಿಕೊಂಡು ಸರ್ಕಾರವು ಸೂಚಿಸುವ ಸ್ವೀಕೃತದಾರರ (Recipient) ಖಾತೆಗೆ online ಮೂಲಕ ಜಮೆ ಮಾಡುತ್ತದೆ.

v. ಅನುದಾನಿತ ಶಿಕ್ಷಣ ಸಂಸ್ಥೆಗಳು, ಬಿಲ್ಲಿನಲ್ಲಿ ಕಡಿತಗೊಳಿಸುವ ವಂತಿಗೆಗಳು ಸಂಸ್ಥೆಯ ಮುಖ್ಯಸ್ಥರ ಖಾತೆಯಲ್ಲಿ (ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು) ಜಮೆಯಾಗಲಿದ್ದು, ಸದರಿ ಮೊತ್ತವನ್ನು ಸಂಸ್ಥೆಯ ಮುಖ್ಯಸ್ಥರು ಖಜಾನೆ-2 Portal (https://k2.karnataka.gov.in) ನಲ್ಲಿ ಮೇಲ್ಕಂಡ ಠೇವಣಿ ಖಾತೆಗೆ ಜಮೆಯಾಗುವಂತೆ ಚಲನ್ ಸೃಜಿಸಿ, ಏಜೆನ್ಸಿ ಬ್ಯಾಂಕ್ ಮೂಲಕ ಜಮೆ ಮಾಡಬೇಕಾಗುತ್ತದೆ.

vi. ಇದೇ ರೀತಿ ನಿಗಮ/ಮಂಡಳಿಗಳು/ಪ್ರಾಧಿಕಾರ/ವಿಶ್ವವಿದ್ಯಾನಿಲಯಗಳು ಮತ್ತು ಇತರೆ ಸ್ವಾಯತ್ತ ಸಂಸ್ಥೆಗಳು ತಮ್ಮ ನೌಕರರಿಂದ ಸಂಗ್ರಹಿಸುವ ವಂತಿಗೆಗಳನ್ನು ಖಜಾನೆ-2 Portal (https://k2.karnataka.gov.in) ನಲ್ಲಿ ಮೇಲ್ಕಂಡ ಠೇವಣಿ ಖಾತೆಗೆ ಜಮೆಯಾಗುವಂತೆ ಚಲನ್ ಸೃಜಿಸಿ, ಏಜೆನ್ಸಿ ಬ್ಯಾಂಕ್ ಮೂಲಕ ಜಮೆ ಮಾಡಬೇಕಾಗುತ್ತದೆ.

vii. ಈ ರೀತಿ ಚಲನ್ ಮೂಲಕ ಜಮೆಯಾದ ಮೊತ್ತವೂ ಸಹ ರಾಜ್ಯ ಹುಜೂರ್ ಖಜಾನೆಯಲ್ಲಿ ಲೆಕ್ಕವಾಗಿ ಅದನ್ನು ಸಹ ರಾಜ್ಯ ಹುಜೂರ್ ಖಜಾನೆಯು ಸರ್ಕಾರವು ಸೂಚಿಸುವ ಸ್ವೀಕೃತದಾರರ (Recipient) ಖಾತೆಗೆ online ಮೂಲಕ ಜಮೆ ಮಾಡುತ್ತದೆ.

ಈ) ಪುಣ್ಯಕೋಟಿ ದತ್ತು ಯೋಜನೆಗೆ ರಾಜ್ಯ ಸರ್ಕಾರಿ ನೌಕರರ ವೇತನದಿಂದ ಕಟಾಯಿಸಲಾದ ಮೊತ್ತವನ್ನು ಯೋಜನೆಯ ಅನುಷ್ಠಾನದ ಸಕ್ಷಮ ಪ್ರಾಧಿಕಾರಿ, ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ತೆರೆದಿರುವ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.

ಉ) ನವೆಂಬರ್-2022ರ ಮಾಹೆಯಲ್ಲಿ ಸ್ವೀಕರಿಸಲಾದ ವೇತನ ಬಿಲ್ಲುಗಳ ನಿರ್ವಹಣೆಯನ್ನು 2022ರ ಡಿಸೆಂಬರ್ 31ನೇ ದಿನಾಂಕದೊಳಗೆ ಪೂರೈಸಬೇಕು. ಡಿಸೆಂಬರ್ ತಿಂಗಳು ಅಂತ್ಯಗೊಂಡ ನಂತರ ಪಾವತಿ ಮಾಡಿದ ಬಿಲ್ಲುಗಳ ಪ್ರಕರಣಗಳಲ್ಲಿ ಅವುಗಳನ್ನು ಪಾವತಿ ಮಾಡಿದ ಒಂದು ವಾರದೊಳಗೆ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ತೆರೆಯಲಾಗುವ ಖಾತೆಗೆ ಜಮೆ ಮಾಡಲು ನಿಯಮಾನುಸಾರ ಕ್ರಮವಹಿಸುವುದು ಹಾಗೂ ಹೀಗೆ ಕೈಗೊಂಡ ಕ್ರಮದ ಬಗ್ಗೆ ಒಂದು ಮಾಹಿತಿಯನ್ನು ಖಜಾನೆ ಆಯುಕ್ತರು, ಬೆಂಗಳೂರು ಇವರಿಗೆ ಕಳುಹಿಸಬೇಕು.

ಊ) ಮಹಾಲೇಖಪಾಲರು ನೀಡಿದ ಅಧಿಕಾರ ಪತ್ರದ ಮೇಲೆ ತಮ್ಮ ವೇತನವನ್ನು ಖಜಾನೆಯಿಂದ ಪಡೆಯುವ ಅಧಿಕಾರಿಗಳೂ ಸಹ ಮೇಲೆ ಕಾಣಿಸಿದ ಕ್ರಮವನ್ನು ಪಾಲಿಸುವುದು.

ಋ) ಸರ್ಕಾರದ ಸ್ವಾಯತ್ತ ನಿಗಮ/ಮಂಡಳಿಗಳು, ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳೂ ಸೇರಿದಂತೆ ಸರ್ಕಾರದ ಅನುದಾನ ಪಡೆಯುವ ಇತರೆ ಸಂಸ್ಥೆಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ನೌಕರರ ಪ್ರಕರಣಗಳಲ್ಲಿಯೂ ಸಹ ಈ ಮೇಲಿನ ರೀತಿಯ ಕ್ರಮವನ್ನು ಅನುಸರಿಸತಕ್ಕದ್ದು.

ಎ) ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ, ಬೆಂಗಳೂರು ರವರು ಈ ವಂತಿಗೆ ಹಣವನ್ನು ಉದ್ದೇಶಿತ ಯೋಜನೆಗೆ ಬಳಸಿಕೊಳ್ಳಲು ಅಧಿಕಾರ ಹೊಂದಿರುತ್ತಾರೆ.

ಏ) ನೌಕರರ ವೇತನದಿಂದ ಕಟಾವು ಮಾಡಲಾದ ವಂತಿಗೆ ಹಾಗೂ ಅದರ ಬಳಕೆಯ ವರದಿಗಳನ್ನು ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಕಾಲಕಾಲಕ್ಕೆ ಸಲ್ಲಿಸುವುದು.

ಐ) ಯೋಜನೆಗೆ ಕಟಾವು ಮಾಡಲಾದ ವಂತಿಗೆಯ ಬಳಕೆಯ ಕುರಿತಂತೆ ನಿಯಮಾನುಸಾರ ಲೆಕ್ಕ-ಪತ್ರ ತಪಾಸಣಾ ಕ್ರಮದ ವರದಿಯನ್ನು ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆಗೆ ಸಲ್ಲಿಸುವುದು.

ಒ) ನೌಕರರ ವೇತನದಿಂದ ಸಂಗ್ರಹಿಸಲಾದ ವಂತಿಗೆ ಮೊಬಲಗು ಮತ್ತು ಅದರ ವಿನಿಯೋಗದ ಕುರಿತು ಸೂಕ್ತ ಸ್ಪಷ್ಟೀಕರಣ/ನಿರ್ದೇಶನದ ಅವಶ್ಯಕತೆ ಇದ್ದಲ್ಲಿ ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸಸೌಧ, ಬೆಂಗಳೂರು-1 ಇವರಿಗೆ ಸಲ್ಲಿಸುವುದು ಮತ್ತು ಈ ಬಗ್ಗೆ ಸರ್ಕಾರದ ತೀರ್ಮಾನ ಅಂತಿಮವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಉಮಾ. ಕೆ.)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-2).

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
3. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
4. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
5. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
9. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
10. ಎಲ್ಲಾ ಜಿಲ್ಲೆಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
11. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
12. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
13. ಖಜಾನೆ ಆಯುಕ್ತರು, ಕೆ.ಪಿ.ಸಿ.ಎಲ್. ಕಟ್ಟಡ, 6ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001.
14. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರು (ಆಡಳಿತ).
15. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು.
16. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್. ಕೆ.ಪಿ.ಸಿ.ಎಲ್. ಕಟ್ಟಡ, 6ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001.
17. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
18. ವಾರಪತ್ರ/ರಕ್ಷಾ ಕಡತ.